## ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಕೃಷ್ಣರಾಜನಗರ

**ಸಿ.ಸಿ.ನಂ.829/2017**

ಪಿರ್ಯಾದಿಃ ಕೆ.ಆರ್.ನಗರ ಪೋಲೀಸರು

ವಿರುದ್ಧ

ಆರೋಪಿತರುಃ

1. ಸ್ವಾಮಿ,
ಬಿನ್ ಲೇಟ್ ಬೋಗಯ್ಯ,
33 ವರ್ಷ,

2. ಶಿವಣ್ಣ,
ಬಿನ್ ಲೇಟ್ ಬೋಗಯ್ಯ,
56 ವರ್ಷ,
ಇಬ್ಬರೂ ಬೊಮ್ಮನಹಳ್ಳಿ ಗ್ರಾಮ,
ಮೈಸೂರು ತಾಲ್ಲೂಕು,
ಮೈಸೂರು ಜಿಲ್ಲೆ,

3. ಮಹದೇವ,
ಬಿನ್ ಚಿಕ್ಕಯ್ಯ,
33 ವರ್ಷ,
ಸೌತನಹಳ್ಳಿ ಗ್ರಾಮ,
ಕೆ.ಆರ್.ನಗರ ತಾಲ್ಲೂಕು,
ಮೈಸೂರು ಜಿಲ್ಲೆ.

### ದೋಷಾರೋಪಣೆ

ಶ್ರೀ.ಆರ್.ಎಸ್.ಗಾಣಿಗೇರ್., ಬಿ.ಕಾಂ, ಎಲ್.ಎಲ್.ಎಂ., ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ. ಆದ ನಾನು ಆರೋಪಿತರಾದ ನಿಮ್ಮನ್ನು ಈ ಕೆಳಕಂಡಂತೆ ದೋಷಾರೋಪಣೆಗೆ ಗುರಿಪಡಿಸುತ್ತೇನೆ.

ದಿನಾಂಕಃ 19.08.2016 ರಂದು ಸಂಜೆ 05.30 ಗಂಟೆ ಸಮಯದಲ್ಲಿ ಕೆ.ಆರ್.ನಗರ ಪೋಲೀಸ್ ಠಾಣಾ ಸರಹದ್ದಿಗೆ ಸೇರಿದ ಸೌತನಹಳ್ಳಿ ಗ್ರಾಮದಲ್ಲಿ ಚಾಸಾ 01 ಮಹೇಶ್ ರವರು ಶಿವನಂಜಯ್ಯ ನವರ ಮನೆಯ ಮುಂದಿನ ಸೇತುವೆ ಮೇಲೆ ಕುಳಿತಿದ್ದಾಗ ನೀವು ಆರೋಪಿತರು ಏಕೋದ್ದೇಶದಿಂದ ಅವರ ಜೊತೆ ಜಗಳ ತೆಗೆದು ಅವರನ್ನು ಮುಂದೆ

ಹೋಗದಂತೆ ಅಕ್ರಮವಾಗಿ ತಡೆದು ಆ ಮೂಲಕ ಆರೋಪಿತರಾದ ನೀವುಗಳು ಭಾರತ ದಂಡ ಸಂಹಿತೆ ಕಲಂ.341 ಓದಿ ಕಲಂ 34 ರಡಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಿ ಎಂಬುದಾಗಿ ನಿಮ್ಮ ಮೇಲೆ ದೋಷಾರೋಪಣೆ ಮಾಡಲಾಗಿದೆ.

ಎರಡನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವುಗಳು ಏಕೋದ್ದೇಶದಿಂದ ಚಾಸಾ 01 ರವರ ಜೊತೆ ಜಗಳ ತೆಗೆದು ಏಕೆ ನಮ್ಮ ಮನೆಗೆ ಬಂದು ಸೊಸೆಯ ಜೊತೆ ಗಲಾಟೆ ಮಾಡಿದ್ದೀಯ ಅಂತ ಅಂದು ನೀವು 1 ನೇ ಆರೋಪಿ ಅವರನ್ನು ತಬ್ಬಿ ಹಿಡಿದುಕೊಂಡಾಗ ನೀವು 2 ಹಾಗೂ 3 ನೇ ಆರೋಪಿತರು ಕೈಗಳಿಂದ ಅವರ ಮುಖಕ್ಕೆ, ತುಟಿಗೆ, ಹೊಟ್ಟೆಗೆ, ಎದೆಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿದ್ದು ಆ ಮೂಲಕ ಆರೋಪಿತರಾದ ನೀವುಗಳು ಭಾರತ ದಂಡ ಸಂಹಿತೆ ಕಲಂ.323 ಸಹ ಕಲಂ 34 ಅಡಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಿ ಎಂಬುದಾಗಿ ನಿಮ್ಮ ಮೇಲೆ ದೋಷಾರೋಪಣೆ ಮಾಡಲಾಗಿದೆ.

ಕೊನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವುಗಳು ಏಕೋದ್ದೇಶದಿಂದ ಚಾಸಾ 1 ರವರ ಜೊತೆ ಜಗಳ ತೆಗೆದು ಬೋಳಿ ಮಗನೆ, ಸೂಳೆ ಮಗನೆ ಎಂದು ಅವಾಚ್ಯವಾಗಿ ಬೈದು ಆ ಮೂಲಕ ಆರೋಪಿತರಾದ ನೀವುಗಳು ಭಾರತ ದಂಡ ಸಂಹಿತೆ ಕಲಂ.504 ಸಹ ಕಲಂ 34 ರ ಅಡಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಿ ಎಂಬುದಾಗಿ ನಿಮ್ಮ ಮೇಲೆ ದೋಷಾರೋಪಣೆ ಮಾಡಲಾಗಿದೆ.

ಪ್ರಶ್ನೆ: ನಿಮಗೆ ಈ ಓದಿ ಹೇಳಿದ ನಿಮ್ಮ ಮೇಲಿನ ದೋಷರೋಪಣೆಯನ್ನು ಕೇಳಿಸಿಕೊಂಡಿರಾ?

ಉತ್ತರ: 1 ನೇ ಆರೋಪಿ:
2 ನೇ ಆರೋಪಿ:
3 ನೇ ಆರೋಪಿ:

ಪ್ರಶ್ನೆ: ನಿಮ್ಮ ಮೇಲಿನ ದೋಷಾರೋಪಣೆಯನ್ನು ನೀವು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೆ?

ಉತ್ತರ: 1 ನೇ ಆರೋಪಿ:

2 ನೇ ಆರೋಪಿ:

3 ನೇ ಆರೋಪಿ:

(ಆರ್.ಎಸ್.ಗಾಣಿಗೇರ್)

ಹೆಚ್ಚುವರಿ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿ

ಕೃಷ್ಣರಾಜನಗರ

ದಿನಾಂಕ: 20.02.2018